ಅಧಿವೇಶನಗಳಿಗೆ ಹೋಗಬೇಕಾಯಿತು. ಸಾಮಾನ್ಯವಾಗಿ ಒಬ್ಬ ವಿದ್ಯಾರ್ಥಿಗೆ ಎರಡು ವರ್ಷಕ್ಕೆ ಒಮ್ಮೆ ಇಂತಹ ಅಧಿವೇಶನಗಳಲ್ಲಿ ಭಾಗವಹಿಸಲು ಆರ್ಥಿಕ ನೆರವನ್ನು ನೀಡಲಾಗುತ್ತದೆ. ಆದರೆ, ಟರ್ನರ್ ಏನೇನೋ ಲೆಕ್ಕಾಚಾರ ತೋರಿಸಿ ನಯನಾಳನ್ನು ಎರಡು ವರ್ಷದಲ್ಲಿ ನಾಲ್ಕು ಅಧಿವೇಶನಗಳಿಗೆ ಕಳಿಸಿಕೊಟ್ಟ. ಸಾಲದೆಂಬಂತೆ ತಾನು ನಾಲ್ಕು ಕಡೆಯೂ ಹಾಜರಿದ್ದ. ಕಥೆ ಕಟ್ಟುವ ಅವಶ್ಯಕತೆಯೇ ಇಲ್ಲ!

ಇಷ್ಟು ದಿನ ನಯನಾ, ಟರ್ನರ್ ಅವನನ್ನು ನೋಡಬೇಕಾದರೆ ಸ್ಟೆಲ್ಲಾ ಮೂಲಕ ಹೋಗಬೇಕಿತ್ತು. ಈಗೀಗ ಅವನೇ ಅವಳನ್ನು ತನ್ನ ಕೊಠಡಿಗೆ ಕರೆದು ವಿಚಾರ ವಿನಿಮಯ ಮಾಡಿಕೊಳ್ಳುತ್ತಿದ್ದ. ಅವಳೂ ಹಾಗೆಯೇ. ತನಗೆ ಬೇಕೆನಿಸಿದಾಗ ಅವನ ಕೊಠಡಿಗೆ ಹೋಗುತ್ತಿದ್ದಳು. ಅವನ ಕಾರ್ಯದರ್ಶಿ ವಿಯೆಟ್ನಾಮಿನ ಡಾಂಗ್ ತಡೆಯುತ್ತಿರಲಿಲ್ಲ. ಅವರಿಬ್ಬರೂ ಒಳಗೆ ಇದ್ದಾಗ ಅವನಿಗೆ ಬರುವ ಟೆಲಿಫೋನ್ ಕರೆಗಳಿಗೆ "ಅವರಿಲ್ಲ. ಎಲ್ಲಿಯೋ ಹೋಗಿದ್ದಾರೆ." ಎಂಬ ಉತ್ತರ ನೀಡುತ್ತಿದ್ದಳು. ಸಾಲದ್ದಕ್ಕೆ ನಯನಾ ಸ್ಟೆಲ್ಲಾಳೊಡನೆ ಮಾತನಾಡುವುದನ್ನು ನಿಲ್ಲಿಸಿದಳು. ಇದನ್ನೆಲ್ಲಾ ಕಂಡ ಸ್ಟೆಲ್ಲಾ ಕುಪಿತಳಾಗಿದ್ದಲ್ಲಿ ಆಶ್ಚರ್ಯವೇನಿಲ್ಲ.

ಸಾಲದೆಂಬಂತೆ ನಯನಾ ಕೇವಲ ಎರಡು ವರ್ಷಗಳಲ್ಲಿ ಪಿಎಚ್.ಡಿ ಪ್ರಬಂಧವನ್ನು ಮಂಡಿಸಿದಳು. ಅವಳಿಗೆ ಡಿಗ್ರಿಯೂ ಲಭಿಸಿತು. ಇದು ಪ್ರಯೋಗಾಲಯದ ಮಿಕ್ಕವರಿಗೆ ಅಸಹನೀಯ ಎನಿಸಿತು. ಸಾಧಾರಣವಾಗಿ ಟರ್ನರ್ ವಿದ್ಯಾರ್ಥಿಗಳನ್ನು ಮೂರು ನಾಲ್ಕು ವರ್ಷಗಳ ಕಾಲ ದುಡಿಸಿ ಒಬ್ಬೊಬ್ಬರಿಂದಲೂ ಹದಿನೈದಾದರೂ ಪೇಪರುಗಳನ್ನು ಪ್ರಕಟಿಸಿದ ನಂತರ ಅವರಿಗೆ ಥೀಸಿಸ್ ಸಲ್ಲಿಸಲು ಅನುಮತಿ ನೀಡುತ್ತಿದ್ದ. ಪ್ರತಿ ಪೇಪರಿನಲ್ಲಿಯೂ ಅವನ ಹೆಸರು ಇದ್ದು, ಹೀಗಾಗಿ ಅವನ ಕೀರ್ತಿ ಹೆಚ್ಚುತ್ತಿತ್ತು. ಆದರೆ, ನಯನಾ ಎಸಗಿದ್ದ ಸಂಶೋಧನೆ ಐದಾರು ಪೇಪರುಗಳಿಗೆ ಸಾಕೆನಿಸಿತ್ತು. ಮಿಕ್ಕ ಹತ್ತು ಪೇಪರುಗಳ ಮೇಲೆ ಟರ್ನರ್ ಅವಳ ಹೆಸರನ್ನು ಸೇರಿಸಿದ್ದ. ಅವುಗಳ ಸಂಶೋಧನೆ ಮಾಡಿದವರು ಮಿಕ್ಕವರಾರೋ! ಸಂಬಂಧ ಪಟ್ಟವರು ಹೆದರಿ ಸುಮ್ಮನಿದ್ದರು.

ಇಲ್ಲಿಗೆ ನಿಲ್ಲಿಸದೆ ಟರ್ನರ್ ನಯನಾಳಿಗೆ ಅಲ್ಲಿಯೇ ಸಹಾಯಕ ಉಪನ್ಯಾಸಕಿಯ ಸ್ಥಾನವನ್ನು ಕೊಡಿಸುವ ಹುನ್ನಾರ ಹೂಡಿದಾಗ ಎಲ್ಲರಿಗೂ ಪರಿಸ್ಥಿತಿ ಮಿತಿ ಮೀರಿದೆ ಎನಿಸಿತು. ಪ್ರಯೋಗಾಲಯದಲ್ಲಿ ಕೆಲವು ಯುವಕರು ಸುಮಾರು ಹತ್ತು ವರ್ಷಗಳಿಂದ ಸಂಶೋಧನೆ ನಡೆಸುತ್ತಾ ಬಂದು ಹಲವಾರು ಪೇಪರುಗಳನ್ನು ಬರೆದಿದ್ದರು. ಅವರಿಗೂ ಪಿಎಚ್.ಡಿ. ಪದವಿ ಇತ್ತು. ಅವರೂ ಬುದ್ಧಿವಂತರೇ. ಆದರೆ, ಅವರನ್ನು ಟರ್ನರ್ ಕಡೆಗಣಿಸುತ್ತಾ ಬಂದಿದ್ದ. ಅನೇಕ ಮಂದಿಯ ಸಂಶೋಧನೆಗಳಲ್ಲಿ ನೆರವಾಗಿದ್ದ ಸ್ಟೆಲ್ಲಾ ಅಲ್ಲಿಯೇ ಕೊಳೆಯುತ್ತಿದ್ದಳು. ಇನ್ನು ಸುಮ್ಮನಿರುವುದು ಅಸಾಧ್ಯ ಎನಿಸಿತು. ಅವಳು ಹತ್ತಿರದ ರೆಸ್ಟೋರೆಂಟ್ ಒಂದರಲ್ಲಿ ಒಂದು ಸಭೆಯನ್ನು ಕರೆದು ಪ್ರಯೋಗಾಲಯದ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳನ್ನು ಆಹ್ವಾನಿಸಿದಳು. ಸಭೆಯಲ್ಲಿ ನಯನಾ ಕೂಡ ಹಾಜರಿದ್ದಳು. ಅಲ್ಲಿ ಟರ್ನರ್ ನ ಮಾಜಿ ಹೆಂಡತಿ ಈವಾನಳನ್ನು ಕಂಡು ಎಲ್ಲರಿಗೂ ಆಶ್ಚರ್ಯ.

ಸಾಕಷ್ಟು ಸಿದ್ಧತೆ ಮಾಡಿಕೊಂಡು ಬಂದಿದ್ದ ಸ್ಟೆಲ್ಲಾ ಸಭೆಯನ್ನು ಉದ್ದೇಶಿಸಿ ಮಾತನಾಡಿದಳು.

"ಪ್ರಯೋಗಾಲಯದ ಇತ್ತೀಚಿನ ವಿದ್ಯಮಾನಗಳ ಬಗ್ಗೆ ನಾನು ನಿಮಗೆ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಎಲ್ಲರಿಗೂ ತಿಳಿದ ಸಂಗತಿ. ಪ್ರಾಮಾಣಿಕವಾಗಿ ಹತ್ತಾರು ವರ್ಷಗಳ ಸೇವೆ ಸಲ್ಲಿಸಿ, ಪ್ರಯೋಗಾಲಯ ಮತ್ತು ವಿಶ್ವವಿದ್ಯಾಲಯಗಳ ಖ್ಯಾತಿಗೆ ನೆರವಾದವರನ್ನು ಈಗ ಕಡೆಗಣಿಸಲಾಗಿದೆ, ಅವರುಗಳ ಕೊಡುಗೆಗೆ ಗೌರವ ಇಲ್ಲದಂತಾಗಿದೆ. ಬದಲಾಗಿ ಇತ್ತೀಚೆಗೆ ಸೇರಿ ವಿಲಿಯಂನ ಕಾಮ ಪಿಪಾಸೆಯನ್ನು ನೀಗಿಸುವವರು ಮೇಲುಗೈ ಪಡೆಯುತ್ತಿದ್ದಾರೆ. ನಿಮಗೆ ತಿಳಿದಿರುವ ಹಾಗೆ ವಿಶ್ವವಿದ್ಯಾಲಯದಲ್ಲಿ ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದ ದೂರುಗಳನ್ನು ಸ್ವೀಕರಿಸುವ ಸಮಿತಿಯೊಂದಿದೆ. ಅವರು ನನಗೆ ನೀಡಿರುವ ತಿಳಿವಳಿಕೆಯ ಪ್ರಕಾರ ವಿಲಿಯಮ್‌ನ ವರ್ತನೆಯೂ ಆ ಸಮಿತಿಯ ಪರಿಧಿಯಲ್ಲಿಯೇ ಬರುತ್ತದೆ. ಹೀಗಾಗಿ, ನಾವೆಲ್ಲಾ ಕೂಡಿ ಒಂದು ದೂರು ಸಲ್ಲಿಸುವ ಸಲಹೆ ನನ್ನದು. ಇದನ್ನು ಬೆಂಬಲಿಸುವವರೆಲ್ಲಾ ದೂರಿಗೆ ಸಹಿ ಮಾಡಿ, ವಿಚಾರಣೆಯಾದಾಗ ಸಾಕ್ಷಿ ನೀಡಬೇಕಾಗುತ್ತದೆ. ಸಿದ್ಧರಿದ್ದೀರಾ? ನಮ್ಮಲ್ಲಿ ಯಾರಾದರೂ ಬಯಸಿದರೆ ನಿಮ್ಮ ಹೆಸರಿನಲ್ಲಿಯೇ ದೂರು ಸಲ್ಲಿಸಬಹುದು. ನಾವೆಲ್ಲಾ ಒಗ್ಗೂಡಿ ಈ ಕೆಲಸ ಮಾಡಿದರೆ ನಮ್ಮ ದೂರಿಗೆ ಹೆಚ್ಚಿನ ಬೆಲೆ ಇರುತ್ತದೆ.